ಉ) ಕಾಲೇಜಿನ ಜಮೀನಿನಲ್ಲಿ 40 ಸೆಂಟನಷ್ಟು ನಿವೇಶನವು ಬೆಳ್ತಂಗಡಿ ತಾಲ್ಲೂಕು ವಸತಿ ಯೋಜನೆಯ ಫಲಾನುಭವಿಗಳಿಂದ ಅತಿಕ್ರಮಣವಾಗಿದ್ದು, ಇದನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕೋರಲಾಗಿದೆ

534(559) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಅವುಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರ ಹುದ್ದೆಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಪ್ರಸ್ತುತ ಇರುವ 75 25 ಅನುಪಾತದ ಬದಲು ನೂರಕ್ಕೆ ನೂರರಂತೆ ಬಡ್ತಿ ಮೂಲಕವೇ ತುಂಬುವ ಕುರಿತು ಸರ್ಕಾರದ ನಿಲುವುಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ತಾಲ್ಲೂಕುವಾರು ಒಟ್ಟು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಅವುಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರುಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು	ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳು
1	ಮಂಗಳೂರು ನಗರ	05	04
2	ಮಂಗಳೂರು ತಾಲ್ಲೂಕು	24	23
3	ಬಂಟ್ವಾಳ	20	17
4	ಪುತ್ತೂರು	08	06
5	ಸುಳ್ಯ	10	08

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು	ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳು
6	ಬೆಳ್ತಂಗಡಿ	17	15
7	ಮೂಡಬಿದ್ರೆ	07	05
	ಒಟ್ಟು	**91**	**78**

ಆ) ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಈ ಹಿಂದೆ 50 50 ಇದ್ದಂತಹ ನೇರ ನೇಮಕಾತಿ ಬಡ್ತಿ ಕೋಟಾವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 51 ಡಿಜಿಓ 2005, ದಿನಾಂಕ 30 10 2006ರಂತೆ 25 75 ರಂತೆ ಬದಲಾಯಿಸಿದೆ ಈ ರೀತಿ ಬಡ್ತಿಯ ಕೋಟಾವನ್ನು ಶೇಕಡಾ 25ರಷ್ಟು ಹೆಚ್ಚಿಸಲಾಗಿದೆ 100% ಕ್ಕೆ ನೂರು ಬಡ್ತಿ ಮೂಲಕ ತುಂಬಿದಲ್ಲಿ, ಮುಖ್ಯೋಪಾಧ್ಯಾಯರ ವೃಂದದಲ್ಲಿ ನೇರ ನೇಮಕಾತಿ ಇಲ್ಲದಂತಾಗುತ್ತದೆ ಆದ್ದರಿಂದ 25 75ರ ಕೋಟಾದ ಬದಲು 100ಕ್ಕೆ 100 ಬಡ್ತಿ ನೀಡುವುದು ಸಮಂಜಸವಲ್ಲ

535(951) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಪ್ರಸಕ್ತ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಲ್ಲಿ ಒದಗಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು, (ನಗರವಾರು, ಗ್ರಾಮಾಂತರವಾರು, ಕ್ಷೇತ್ರವಾರು ವಿವರ ನೀಡುವುದು,

ಆ) ಈ ಯೋಜನೆಯಲ್ಲಿ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ಅಂದರೆ 2006–07ನೇ ಸಾಲಿನಲ್ಲಿ ಸರ್ಕಾರವು ಗ್ರಾಮೀಣ ಆಶ್ರಯ ಯೋಜನೆಗೆ ಪ್ರತೀ ಗ್ರಾಮ ಪಂಚಾಯಿತಿಗೆ 60 ಮನೆಗಳಂತೆ ಒಟ್ಟು 340560 ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 53299 ಗುರಿಯನ್ನು ನೀಡಿ ಆದೇಶ ಹೊರಡಿಸಿದೆ